ಅಧ್ಯಕ್ಷರು : ಯಾವಾಗ ತೆಗೆದುಕೊಳ್ಳುವುದು? ಬೇಡ. ಅವುಗಳಿಗೆ ಎಲ್ಲಾ ದಯವಿಟ್ಟು ಉತ್ತರ ಕೊಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ನಾಳೆ ಒಂದು ದಿನ ಮಧ್ಯಾಹ್ನದವರಿಗೆ ಸದನವನ್ನು ನಡೆಸಿ.

ಅಧ್ಯಕ್ಷರು : ಅರ್ಧ ಶಾಸಕರೆಲ್ಲ ಮನೆಗೆ ಹೋಗಿದ್ದಾರೆ.

14. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು :

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ದಿನಾಂಕ: 02.08.2012ನೇ 8ನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 15 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಉತ್ತರಿಸುವ 73 ಪ್ರಶ್ನೆಗಳ ಪೈಕಿ 71 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ–6)

ಅಧ್ಯಕ್ಷರು : ಮಂಡಿಸಲಾಯಿತು. ಗಮನ ಸೆಳೆಯುವ ಸೂಚನೆಗಳಿಗೆ ಈ ದಿವಸಕ್ಕೆ ಸ್ವೀಕರಿಸಲಾಗಿರುವ ಉತ್ತರಗಳನ್ನು ಮಾನ್ಯ ಸದಸ್ಯರುಗಳಿಗೆ ಒದಗಿಸಲಾಗುವುದು.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, Zero hour ವಿಷಯಗಳಿಗೆ ಉತ್ತರ ಕೊಡಿಸಿ.

15. 13ನೇ ವಿಧಾನಸಭೆಯ 14ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ :

ಅಧ್ಯಕ್ಷರು : ಅದನ್ನು ಕೊಡುತ್ತೇನೆ. ಈಗ 13ನೇ ವಿಧಾನಸಭೆಯ 14ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ.

13ನೇ ವಿಧಾನಸಭೆಯ 14ನೇ ಅಧಿವೇಶನವು ದಿನಾಂಕ 19ನೇ ಜುಲೈ 2012 ರಿಂದ 2ನೇ ಆಗಸ್ಟ್ 2012ರವರೆಗೆ 11 ದಿನಗಳು ಸಮಾವೇಶ ಗೊಂಡು ಸುಮಾರು 80 ದಿನಗಳ ಕಾಲ ಸರ್ಕಾರಿ ಹಾಗೂ ಖಾಸಗಿ ಕಲಾಪ ಗಳನ್ನು ನಡೆಸಿದೆ. ಈ ಅಧಿವೇಶನದಲ್ಲಿ ರಾಜ್ಯದ ಮಾಜಿ ರಾಜ್ಯಪಾಲರಾದ ಶ್ರೀ ಗೋವಿಂದ ನಾರಾಯಣ, ಮಾಜಿ ಸಚಿವರಾದ ಶ್ರೀ ಕೆ.ಎಂ. ಕೃಷ್ಣಾರೆಡ್ಡಿ,